INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -2, March-April, 2023,
PageNo,19- 23
Peer -Reviewed, Refereed Journal

# ತಾವರೇಕೆರೆಯ ಅಘೋರೇಶ್ವರ ದೇವಾಲಯ–ಒಂದು ಸಾಂಸ್ಕೃತಿಕ ಅವಲೋಕನ

**ಡಾ.ಮೋಹನ್.ಕೆಎನ್.**[1]

ಕಲೆ ಮತ್ತು ವಾಸ್ತುಶಿಲ್ಪಗಳು ಆಯ ಕಾಲಘಟ್ಟದ ಇತಿಹಾಸವನ್ನು ಗುರುತಿಸುವಿಕೆಯಲ್ಲಿ ಪ್ರಮುಖವಾದ ಆಧಾರಗಳು ಆಗಿವೆ. ಕಲೆಯು ಒಂದು ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದಲ್ಲದೆ ರಾಜಕೀಯ, ಸಾಮಾಜಿಕ, ಧಾರ್ಮಿಕ ಚಟುವಟಿಕೆಯನ್ನು ರೂಪಿಸುವುದರಲ್ಲಿ ಪ್ರಾಚೀನ ಕಾಲದಿಂದಲೂ ಮಹತ್ವವಾದ ಪಾತ್ರವನ್ನು ವಹಿಸುತ್ತಾ ಬಂದಿದೆ. ಉತ್ತಮವಾದ ವಾಸ್ತುಶೈಲಿಯ ಮೂಲಕ ದೀರ್ಘಕಾಲದವರೆಗೆ ನಿಲ್ಲುವ ದೇವಾಲಯಗಳ ಚರಿತ್ರೆಯ ವಿವಿಧ ಯುಗಗಳಲ್ಲಿ ಪ್ರಚಲಿತವಾಗಿದ್ದ ಧರ್ಮದ ವಿವಿಧ ಛಾಯೆಗಳನ್ನು ಭೇದಗಳನ್ನು, ಪ್ರಾಧಾನ್ಯತೆಗಳನ್ನು, ಪ್ರಾಂತೀಯ ಮನೋಧರ್ಮಗಳನ್ನು ಯಶಸ್ವಿಯಾಗಿ ಪ್ರತಿನಿಧಿಸುತ್ತದೆ.

ತುರುವೇಕರೆ ತಾಲೂಕು ಕೇಂದ್ರದಿಂದ 2 ಕಿ.ಮೀ. ದೂರದಲ್ಲಿ ಬಾಣಸಂದ್ರಕ್ಕೆ ಹೋಗುವ ಮಾರ್ಗದಲ್ಲಿ ತಾವರೇಕೆರೆ ಗ್ರಾಮ ಕಂಡುಬರುತ್ತದೆ. ಊರಿನ ವಾಯುವ್ಯ ದಿಕ್ಕಿನಲ್ಲಿ ಉತ್ತರಾಭಿಮುಖವಾಗಿ ಅಘೋರೇಶ್ವರ ದೇವಾಲಯ ನಿರ್ಮಾಣವಾಗಿದೆ. ಇದೊಂದು ಏಕಕೂಟ ದೇವಾಲಯವಾಗಿದ್ದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳು ಕಾಣಬರುತ್ತವೆ. ಈ ದೇವಾಲಯವು ಸಂಪೂರ್ಣವಾಗಿ ಕಣಶಿಲೆಯಲ್ಲಿ ನಿರ್ಮಾಣವಾಗಿದೆ.

ಈ ದೇವಾಲಯದ ನಿರ್ಮಾಣ ಕಾಲಕ್ಕೆ ಸಂಬಂಧಿಸಿದ ಯಾವುದೇ ಶಾಸನಾಧಾರಗಳು ನಮಗೆ ದೊರೆಯುವುದಿಲ್ಲ. ಆದರೆ ತುರುವೇಕೆರೆ ಪಟ್ಟಣದಲ್ಲಿ ನಿರ್ಮಾಣವಾಗಿರುವ ವಿಜಯನಗರ ಕಾಲದ ಗಂಗಾಧರೇಶ್ವರ ದೇವಾಲಯವನ್ನು ಹೋಲುವುದರಿಂದ ಮತ್ತು ಮುಖಮಂಟಪದಲ್ಲಿ ಕಂಡುಬರುವ ಸ್ತಂಭಗಳ ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣವಾಗಿದೆ ಎಂಬ ಅಭಿಪ್ರಾಯಕ್ಕೆ ಬರಬಹುದು.

**ಗರ್ಭಗೃಹ:–** ಗರ್ಭಗೃಹವು 8x8 ಅಡಿಗಳ ಉದ್ದ ಮತ್ತು ಅಗಲವಾಗಿದ್ದು ಚೌಕಾಕಾರವಾಗಿದೆ. ಮಧ್ಯಭಾಗದಲ್ಲಿ ಮೂರು ಅಡಿ ಪಾಣಿಪೀಠದ ಮೇಲೆ ಎರಡು ಅಡಿ ಎತ್ತರವಿರುವ ಶಿವಲಿಂಗವನ್ನು

---

[1].ಸಹ ಪ್ರಾಧ್ಯಾಪಕರು, ಶ್ರೀ.ಡಿ,ದೇವರಾಜ ಅರಸು ಸ,ಪ್ರ,ದ,ಕಾಲೇಜು, ಹುಣಸೂರು.

ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲ್ಛಾವಣಿಯು ಸರಳವಾಗಿದ್ದು ಅರಳಿದ ಪದ್ಮ ಪುಷ್ಪದ ಭುವನೇಶ್ವರಿಯನ್ನು ನಿರ್ಮಿಸಲಾಗಿದೆ. ಉಳಿದಂತೆ ಸರಳವಾಗಿದ್ದು ಇತ್ತೀಚೆಗೆ ಗ್ರಾನೈಟ್ ಶಿಲೆಯನ್ನು ಭಿತ್ತಿಗೆ ಅಳವಡಿಸಲಾಗಿದೆ. ಗರ್ಭಗೃಹದ ಬಾಗಿಲು ಸರಳವಾಗಿದೆ.

**ಸುಖನಾಸಿ:–** ಸುಖನಾಸಿಯು ಸಹ ಗರ್ಭಗೃಹದಷ್ಟೇ ಉದ್ದಗಲವಾಗಿದ್ದು ಮದ್ಯಭಾಗದಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ನಂದಿಯು ವಿವಿಧ ಬಗೆಯ ಆಭರಣಗಳ ಕೆತ್ತನೆಯನ್ನು ಹೊಂದಿದೆ. ಸುಖನಾಸಿಯ ದ್ವಾರವು ಬಳ್ಳಿಸುರುಳಿಗಳ ಕೆತ್ತನೆಯಿಂದ ಅಲಂಕೃತಗೊಂಡಿದ್ದು ಲಲಾಟಬಿಂಬದಲ್ಲಿ ಗಣೇಶನನ್ನು ಬಿಡಿಸಲಾಗಿದೆ.

**ನವರಂಗ:–** ನವರಂಗವು 25x25 ಅಡಿಗಳ ಉದ್ದ ಮತ್ತು ಅಗಲವಾಗಿದೆ. ನವರಂಗದ ಮಧ್ಯದಲ್ಲಿ ನಾಲ್ಕು, ಎಂಟು ಮುಖವಿರುವ ಎಂಟು ಅಡಿ ಎತ್ತರದ ನಾಲ್ಕು ಕಂಬಗಳಿವೆ. ಈ ಕಂಬಗಳು ಆಧಾರ ಬೋದಿಗೆಯನ್ನು ಹೊಂದಿದ್ದು ನಿರಾಲಂಕೃತವಾಗಿವೆ. ಗೋಡೆಗೆ ಹೊಂದಿಕೊಂಡಂತೆ ಒಟ್ಟು ಹನ್ನೆರಡು ಕಂಬಗಳು ನವರಂಗದಲ್ಲಿ ಕಂಡುಬರುತ್ತವೆ. ಕಲ್ಲಿನ ಚಪ್ಪಡಿಗಳನ್ನು ಹಾಸಿ ಮೇಲ್ಛಾವಣಿ ನಿರ್ಮಿಸಲಾಗಿದ್ದು ಭುವನೇಶ್ವರಿಯು ಕಂಡು ಬರುವುದಿಲ್ಲ. ನವರಂಗದ ಬಲಭಾಗದಲ್ಲಿ ಪೂರ್ವಾಭಿಮುಖವಾಗಿ ನಕ್ಷತ್ರಾಕಾರದ ಎರಡು ಅಡಿ ಎತ್ತರದ ಪೀಠದ ಮೇಲೆ 8 ಕೈಗಳನ್ನು ಹೊಂದಿರುವ ಸುಮಾರು 5 ಅಡಿ ಎತ್ತರದ ಮೂರ್ತಿ ಶಿಲ್ಪವೊಂದನ್ನು ಇರಿಸಲಾಗಿದೆ. ಅದರೆ ಎಲ್ಲಾ ಕಯಗಳು ತುಂಡರಿಸಿವೆ. ಮುಖಭಾಗವು ಭಗ್ನಗೊಂಡಿದ್ದು ಪ್ರಭಾವಳಿ, ಕೀರ್ತಿಮುಖ ಕಂಡುಬರುತ್ತವೆ. ಭಗ್ನವಾಗಿರುವುದರಿಂದ ಇದು ಯಾವ ಮೂರ್ತಿಶಿಲ್ಪವೆಂದು ತಿಳಿಯಲು ಸಾಧ್ಯವಾಗಿಲ್ಲ. ಆದರೆ ಊರಿನ ಜನರು ಇದನ್ನು ಸ್ಥಳೀಯವಾಗಿ ಕಂಚಿದೇವರು ಎಂದು ಕರೆಯುತ್ತಾರೆ. ನವರಂಗದ ಎಡಭಾಗದಲ್ಲಿ ಒಂದು ಸಣ್ಣ ಗರ್ಭಗೃಹ ಕಂಡುಬರುತ್ತದೆ. ಇದು 5x5 ಅಡಿ ಉದ್ದಗಲವಾಗಿದ್ದು ಇದೂ ಸಹ ಚೌಕಾಕಾರವಾಗಿದೆ. ಮಧ್ಯದಲ್ಲಿ ಎರಡು ಅಡಿ ಪಾಣಿಪೀಠದ ಮೇಲೆ ಒಂದು ಅಡಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು ಶಿವಲಿಂಗದ ಎದುರಿಗೆ ಒಮದು ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ.

**ಮುಖಮಂಟಪ:–** ಮುಖಮಂಟಪವು 30x20 ಅಡಿ ಉದ್ದ ಮತ್ತು ಅಗಲವಾಗಿದ್ದು ಆಯತಾಕಾರವಾಗಿದೆ. ಮುಖಮಂಟಪದಲ್ಲಿನ ನಾಲ್ಕು ಕಂಬಗಳನ್ನು ವಿಶಿಷ್ಟ ಕಲಾತ್ಮಕ ಕೆತ್ತನೆಗಳೊಂದಿಗೆ ರಚಿಸಿ ನಿಲ್ಲಿಸಲಾಗಿದ್ದು, ಈ ಕಂಬಗಳ ಮೇಲೆ ಕಲ್ಲು ಚಪ್ಪಡಿಗಳನ್ನು ಹಾಸಿ ಮೇಲ್ಛಾವಣಿ ನಿರ್ಮಿಸಲಾಗಿದೆ. ಈ ಕಂಬಗಳು ಸುಮಾರು ಎಂಟು ಅಡಿ ಎತ್ತರವನ್ನು ಹೊಂದಿದ್ದು ಕಣಶಿಲೆಯಲ್ಲಿ ರಚಿತವಾಗಿವೆ. ಕಂಬಗಳಲ್ಲಿ ಸಿಂಹಗಳ ಮೇಲೆ ಪುರುಷನೋರ್ವನು ಕುಳಿತು ಸವಾರಿ ಮಾಡುತ್ತಿರುವಂತೆ ಸಿಂಹಗಳು ತಮ್ಮ ಮುಂಗಾಲುಗಳನ್ನು

ಮೇಲೆ ಎತ್ತಿ ಜಿಗಿಯುತ್ತಿರುವಂತೆ ನಾಲ್ಕು ಕಂಬಗಳನ್ನು ಕೆತ್ತಲಾಗಿದೆ. ಇಂತಹ ಸ್ತಂಭಗಳನ್ನು 'ಸಂಯುಕ್ತ' ಸ್ತಂಭ ಎಂದು ಕರೆಯಲಾಗುತ್ತದೆ.

ಪ್ರಧಾನವಾದ ಕಂಬದ ದಿಂಡಿಗೆ ಹೊಂದಿಕೊಂಡಂತೆ ಎತ್ತರವಾದ ಶಿಲ್ಪಗಳನ್ನು ಅಥವಾ ಉಪಸ್ತಂಭಗಳನ್ನು ಹೊಂದಿರುವ ಕಂಬಗಳನ್ನು ಸಂಯುಕ್ತ ಸ್ತಂಭವೆನ್ನುತ್ತಾರೆ. ಈ ರೀತಿಯ ಸ್ತಂಭಗಳು ಬೃಹತ್ಪ್ರಮಾಣದಲ್ಲಿ ನಿರ್ಮಾಣವಾದುದು ವಿಜಯನಗರ ಕಾಲದಲ್ಲಿ. ಅರಂಭ ಕಾಲೀನ ವಿದ್ವಾಂಸರು ಇವುಗಳನ್ನು 'ಸಂಗೀತ ಸ್ತಂಭ' ಮತ್ತು ಯಾಳಿ ಸ್ತಂಭಗಳೆಂದು ಗುರುತಿಸಿದ್ದರು. ಈ ಸಂಯುಕ್ತ ಸ್ತಂಭಗಳಲ್ಲೂ ಹಲವಾರು ಪ್ರಭೇದಗಳಿವೆ. ಸಾಮಾನ್ಯವಾಗಿ ಈ ಕಂಬಗಳ ಪ್ರಧಾನ ದಿಂಡು ಚಿತ್ರಖಂಡ ವರ್ಗಕ್ಕೆ ಸೇರಿರುತ್ತದೆ. ಇವುಗಳ ಮೂರು ಪ್ರಭೇದಗಳೆಂದರೆ:

1. **ವ್ಯಾಳಕಾಂತ:** ಪ್ರಧಾನ ದಿಂಡಿಗೆ ಹೊಂದಿಕೊಂಡಂತೆ ಎತ್ತರವಾದ, ಜಿಗಿಯುತ್ತಿರುವ ವ್ಯಾಳದ ಶಿಲ್ಪವನ್ನು ಹೊಂದಿರುತ್ತದೆ.
2. **ಸಿಂಹಕಾಂತ:** ಪ್ರಧಾನ ದಿಂಡಿಗೆ ಹೊಂದಿಕೊಂಡಂತೆ ಎತ್ತರವಾದ, ಜಿಗಿಯುತ್ತಿರುವ ಸಿಂಹದ ಶಿಲ್ಪವನ್ನು ಹೊಂದಿರುತ್ತವೆ.
3. **ಅಶ್ವಕಾಂತ:** ಪ್ರಧಾನ ದಿಂಡಿಗೆ ಹೊಂದಿಕೊಂಡಂತೆ ಎತ್ತರವಾದ ಜಿಗಿಯುತ್ತಿರುವ ಕುದುರೆಯ ಶಿಲ್ಪವನ್ನು ಹೊಂದಿರುತ್ತದೆ.

ಈ ಪ್ರಾಣಿಯ ಶಿಲ್ಪಗಳನ್ನಲ್ಲದೆ ದೇವತೆಗಳ, ಲೀಲಾಮೂರ್ತಿಗಳ, ಪರಿವಾರ ದೇವತೆಗಳ, ಋಷಿ ಮುನಿಗಳ, ಭಕ್ತರ, ರಾಜರ, ರಾಜಪರಿವಾರದ, ಸಂಗೀತಗಾರರ ಮುಂತಾದ ಶಿಲ್ಪಗಳನ್ನು ಕೆತ್ತಿರುವುದನ್ನು ಕಾಣಬಹುದು. ಈ ದೇವಾಲಯದ ಕಂಬಗಳು ಸಿಂಹಕಾಂತ ಸ್ತಂಭಗಳಾಗಿವೆ. ಇಂತಹ ಸಿಂಹಕಾಂತ ಅಥವಾ ಸಿಂಹಪಾದ ಸ್ತಂಭಗಳು ಕರ್ನಾಟಕದಲ್ಲಿ ಕೆಲವೇ ಉದಾಹರಣೆಗಳು ದೊರೆತಿದ್ದ ಗಂಗಾವಾರದ ಸೋಮೇಶ್ವರ ದೇವಾಲಯದಲ್ಲಿ, ಶೀರಾಶ್ವದ ಒಂದು ದೇವಾಲಯದಶ್ವಿಂತಹ ಸ್ತಂಭಗಳನ್ನು ಕಾನಬಹುದು. ಇಂತಹ ಸ್ತಂಭಗಳು ಅಪರೂಪವೆನಿಸಿದರೂ ವಿಜಯನಗರ ಕಾಲದ ಸ್ತಂಭಗಳು ಸಾಮಾನ್ಯವಾಗಿ ಇರುತ್ತವೆ.[3] ಈ ದೇವಾಲಯದ ಈ ಸಂಯುಕ್ತ ಸ್ತಂಭಗಳ ಮೇಲೆ ಹಲವರು ದೇವ ದೇವತೆಗಳ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ಲಿಂಗೋದ್ಭವ ಮೂರ್ತಿ, ಶಿವಮೆಚ್ಚಿದ ಕಣ್ಣಪ್ಪ ತನ್ನ ಕಣ್ಣನ್ನು ಬಾಣದಿಂದ ಮೀಟಿ ಶಿವನಿಗೆ ಅರ್ಪಿಸುತ್ತಿರುವ ಕೆತ್ತನೆಗಳು ಕಂಡುಬರುತ್ತವೆ. ತಾಂಡವೇಶ್ವರ, ವಿಷ್ಣು, ಚತುರ್ಮುಖ ಬ್ರಹ್ಮ, ಶಿವತಾಂಡವ ನೃತ್ಯ, ಪಾರ್ವತಿ, ಗಂಗಾ ಮುಂತಾದ ದೇವತೆಗಳ ಕೆತ್ತನೆಗಳಿವೆ. ಕಂಬಗಳ ಮೇಲೆ ಬಳ್ಳಿಸುರುಳಿಗಳ ಅಲಂಕರಣೆ ಇದ್ದು, ಪುಷ್ಪ ಬೋದಿಗೆಯನ್ನು ಹೊಂದಿವೆ. ಬೋದಿಗೆಗಳ ಕೆಳಭಾಗವನ್ನು ತಲೆಕೆಳಕಾದ ತಾವರೆ ಮೊಗ್ಗಿನ ರೀತಿಯಲ್ಲಿ ಕೆತ್ತಲಾಗಿರುತ್ತದೆ. ಈ ಪ್ರಾಕಾರವು ಹದಿಮೂರನೇ ಶತಮಾನದಿಂದ ಬಳಕೆಗೆ ಬಂದು ವಿಜಯನಗರ

ಕಾಲದಲ್ಲಿ ಹೇರಳವಾಗಿ ಬಳಸಲ್ಪಡುತ್ತಿತ್ತು. ಈ ವಿಧದಲ್ಲಿ ಮುಂಚಾಚನ್ನು ಹೆಚ್ಚಿಸಿ ಮೇಲಿನ ತೊಲೆಗಳಿಗೆ ದೃಢವಾದ ಆಧಾರವನ್ನು ಕೊಡುತ್ತಿದ್ದರು. ಹೀಗಾಗಿ ವಿಜಯನಗರ ಕಾಲದಲ್ಲಿ ಹೇರಳವಾಗಿ ಬಳಸಲ್ಪಡುತ್ತಿತ್ತು. ಈ ವಿಧದಲ್ಲಿ ಮುಂಚಾಚನ್ನು ಹೆಚ್ಚಿಸಿ ಮೇಲಿನ ತೊಲೆಗಳಿಗೆ ದೃಢವಾದ ಆಧಾರವನ್ನು ಕೊಡುತ್ತಿದ್ದರು. ಹೀಗಾಗಿ ವಿಜಯನಗರ ಕಾಲದಲ್ಲಿ ಹೇರಳವಾಗಿ ಬಳಸಲ್ಪಡುತ್ತಿತ್ತು. ಈ ವಿಧದಲ್ಲಿ ಮುಂಚಾಚನ್ನು ಹೆಚ್ಚಿಸಿ ಮೇಲಿನ ತೊಲೆಗಳಿಗೆ ದೃಢವಾದ ಆಧಾರವನ್ನು ಕೊಡುತ್ತಿದ್ದರು. ಹೀಗಾಗಿ ವಿಜಯನಗರದ ಕಾಲದ ತೆರೆದ ಮಂಟಪಗಳಿಗು ವಿಶಾಲವಾದ ಹಜಾರಗಳಿಗೂ ಅನುಕೂಲವಾಗುತ್ತಿತ್ತು. ಈ ಮೇಲ್ಕಂಡ ಲಕ್ಷಣಗಳನ್ನು ಹೊಂದಿರುವ ಕಂಬಗಳನ್ನು ತುರುವೇಕೆರೆ ತಾಲೂಕಿನ ಗಂಗಾಧರೇಶ್ವರ ದೇವಾಲಯದ ಉಪಮಂಟಪದಲ್ಲಿ ಕಾಣಬಹುದಾಗಿದೆ.

**ಅಧಿಷ್ಠಾನ:–** ಕಣಶಿಲೆಯಲ್ಲಿ ಅಧಿಷ್ಠಾನವು ರಚಿತವಾಗಿದ್ದು ನಾಲ್ಕು ಅಡಿ ಎತ್ತರವಾಗಿದೆ. ಮುರು ಪಟ್ಟಿಕೆಗಳನ್ನು ಹೊಂದಿದ್ದು ಹಿನ್ಸರಿತ ಮತ್ತು ಮುನ್ಸರಿತದಂತೆ ಕ್ರಮಬದ್ಧವಾಗಿ ಜೋಡಿಸಲಾಗಿದೆ.

**ಭಿತ್ತಿ:–** ಕಣಶಿಲೆಯ ಕಲ್ಲಿನ ದಿಮ್ಮಿಗಳನ್ನು ಒಂದರ ಮೇಲೊಂದರಂತೆ ಕ್ರಮಬದ್ಧವಾಗಿ ಜೋಡಿಸಿ ಭಿತ್ತಿಯನ್ನು ನಿರ್ಮಿಸಲಾಗಿದೆ. ಭಿತ್ತಿಯು ಸರಳವಾಗಿದ್ದು ಯಾವುದೇ ಮೂರ್ತಿಶಿಲ್ಪಗಳು ಕಂಡುಬರುವುದಿಲ್ಲ. ಕಪೋತವನ್ನು ಒಂದು ಅಡಿ ಮುಂಚಾಚಿರುವಂತೆ ಭಿತ್ತಿಯಿಂದ ಹೊರಮುಖವಾಗಿ ರಚಿಸಲಾಗಿದ್ದ ಹಾರದ ಭಾಗವು ಸರಳವಾಗಿದೆ.

**ಶಿಖರ:–** ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದ್ದು ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಶಿಖರವು ಮುರು ತಲಗಳನ್ನು ಹೊಂದಿದ್ದ ಕೆಳಹಂತದಲ್ಲಿ ಸಣ್ಣಸಣ್ಣ ಅರೆಗಂಬಗಳು ನಾಲ್ಕುದಿಕ್ಕುಗಳಲ್ಲೂ ಕೋಷ್ಠಗುಡಿಗಳ ರಚನೆಯನ್ನು ಮಾಡಲಾಗಿದೆ. ಆದರೆ ಈ ಕೋಷ್ಠಗುಡಿಗಳಲ್ಲಿನ ಮೂರ್ತಿಶಿಲ್ಪಗಳು ಈಗ ಕಣ್ಮರೆಯಾಗಿವೆ. ಎರಡನೇ ಹಂತದಲ್ಲಿ ಬಹುಶಃ ಎರಡುತಲೆ ದೇಹದ ಸಿಂಹ ಅಥವಾ ನಂದಿಯ ಶಿಲ್ಪಗಳಿದ್ದು ಈಗ ತುಂಬಾ ಶಿಥಿಲವಾಸ್ಥೆಯಲ್ಲಿದ್ದು ಗುರುತಿಸಲು ಅಸಾಧ್ಯವಾಗಿದೆ. ಸ್ತೂಪಿಯನ್ನು ವೃತ್ತಾಕಾರವಾಗಿ ನಿರ್ಮಿಸಲಾಗಿದ್ದು ಮೇಲ್ಭಾಗದಲ್ಲಿನ ಕಳಸ ಕಂಡು ಬರುವುದಿಲ್ಲ. ಶಿಖರವು ತುಂಬಾ ಶಿಧಿಲವಾಗಿದ್ದು ಮುಳ್ಳುಗಿಡಗಳು ಬೆಳೆದಿವೆ. ದೇವಾಲಯದ ಪಶ್ಚಿಮ ಭಾಗದಲ್ಲಿ ಪ್ರನಾಳ ನಿರ್ಮಿಸಲಾಗಿದ್ದು ಸುಸ್ಥಿತಿಯಲ್ಲಿದೆ. ದೇವಾಲಯದ ಮುಂದೆ ಸೋಪಾನ ನಿರ್ಮಿಸಲಾಗಿದ್ದು ಪ್ರಾಕಾರ ಕಂಡುಬರುವುದಿಲ್ಲ.

## ಪರಾಮರ್ಶನ ಗ್ರಂಥಗಳು


1. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ತುಮಕೂರು ಜಿಲ್ಲೆ, 1969
2. ಸಿ.ಹಯವದನರಾವ್, Mysore Gazeteer, Compiled for Government,Vol-V, B.R. Publishing Corporation, Delhi, 1927-1930
3. ಡಿ.ಶಿವಲಿಂಗಯ್ಯ (ಸಂ) ತುಮಕೂರು ಜಿಲ್ಲೆಯ ಸ್ಥಳನಾಮಗಳು, 2011
4. ಎಸ್.ಶ್ರೀಕಂಠಶಾಸ್ತ್ರಿ, ಹೊಯ್ಸಳ ವಾಸ್ತುಶಿಲ್ಪ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1965
5. ಕೂ.ಸ.ಅಪರ್ಣ– ದೇವಾಲಯ ವಾಸ್ತು ಪರಿಚಯ, ಕನ್ನಡ ವಿಶ್ವವಿದ್ಯಾನಿಲಯ,ಹಂಪಿ, 1999
6. ಕ್ಷೇತ್ರಕಾರ್ಯದ ಮಾಹಿತಿಯನ್ನು ಆಧರಿಸಿ ಬರೆಯಲಾಗಿದೆ